<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ</u>

<u>ಸಿ.ಸಿ. ಸಂಖ್ಯೆಃ **572/2024**</u>

<u>ಪಿರ್ಯಾದಿ</u> : ರಾಜ್ಯ, ಪರವಾಗಿ ಕುದುರೆಮುಖ ಪೊಲೀಸ್ ಠಾಣೆ,
ಕುದುರೆಮುಖ.

ವಿರುದ್ಧ

<u>ಆರೋಪಿ</u> : **1.** ಅನುಕುಮಾರ ಯಾನೆ ಹನುಮಂತ,
ವಯಸ್ಸು ಸುಮಾರು 20 ವರ್ಷ,
ಬಿನ್ ಬಾಬುಶೇಖರ,
ವಾಸಃ ವಿನೋಭ ನಗರ,
ಕುದುರೆಮುಖ.

ಸ್ವಂತ ಊರುಃ ಅಣಜಿ,
ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.

<u>ದೋಷಾರೋಪಣೆ</u>

ಶ್ರೀ. ವಿಶ್ವನಾಥ್ ಎ., **C/c** ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ, ಆದ ನಾನು, ಆರೋಪಿಯಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆಗಳು ಏನೆಂದರೆಃ-

ದಿನಾಂಕಃ 21.10.2023 ರಂದು ಮಧ್ಯಾಹ್ನ ಸುಮಾರು 2.30 ರಿಂದ 3.00 ರ ಸಮಯದಲ್ಲಿ ಕುದುರೆಮು ಪೊಲೀಸ್ ಠಾಣಾ ವ್ಯಾಪ್ತಿಯ ಕುದುರೆಮುಖ ನಗರದ 5 ನೇ ಸೆಕ್ಟರ್ ನಲ್ಲಿರುವ ಚಾಸಾ1 ರವರ ಮನೆಯ ಹಿಂಬಾಗಿಲನ್ನು ಆರೋಪಿಯಾದ ನೀವು ಈ ಪ್ರಕರಣದ ಕಾನೂನು ಸಂಘರ್ಷಕ್ಕೆ ಒಳಪಟ್ಟ ಬಾಲಕನೊಂದಿಗೆ ಸೇರಿಕೊಂಡು ಹಾರೆಕೋಲಿನಿಂದ ಬಾಗಿಲನ್ನು ಮೀಟಿ ತೆಗೆದು ಒಳಗೆ ಪ್ರವೇಶ ಮಾಡಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ **454** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**2**. ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು ಮುಂದುವರೆದು ಚಾಸಾ1 ರವರ ಮನೆಯ ಒಳಗೆ ಪ್ರವೇಶ ಮಾಡಿ ಸದರಿ ಮನೆಯ ದೇವರ ಗೂಡಿನ ಮುಂಭಾಗದಲ್ಲಿದ್ದ ಒಂದು ಚಿನ್ನ ಚೈನ್ ತೆಗೆದುಕೊಂಡು ಅಲ್ಲಿಂದ ಮುಂದೆ ತೆರಳಿ ನಂತರ ಗಾಡ್ರೇಜ್ ಬಾಗಿಲು ತೆಗೆದಿದ್ದು, ಅದರ ಒಂದು ಲಾಕರ್ ನಲ್ಲಿದ್ದ 8 ಬೆಳ್ಳಿಯ ನಾಣ್ಯಗಳನುನ ಮತ್ತು ಚಿನ್ನದ

ತಾಳಿಯನ್ನು ತೆಗೆದುಕೊಂಡು ನಂತರ ಕಟ್ಟರ್ ನಿಂದ ಮತ್ತೊಂದು ಲಾಕರ್ ತೆರೆದು ಅದರಲ್ಲಿದ್ದ 4 ಚಿನ್ನದ ನಾಣ್ಯಗಳನ್ನು ಮತ್ತು 500/- ರೂ ಮುಖಬೆಲೆಯ 1,00,000/- ರೂಗಳನ್ನು ಕಳ್ಳತನ ಮಾಡಿಕೊಂಡು ಹೋಗಿ ಇಬ್ಬರೂ ಹಣವನ್ನು ಸಮನಾಗಿ ಹಂಚಿಕೊಂಡು ಬೆಳ್ಳಿಯ ಮತ್ತು ಚಿನ್ನದ ನಾಣ್ಯಗಳನುನ ಹಾಗೂ ಚಿಕ್ಕ ತಾಳಿಯನ್ನು ಈ ಪ್ರಕರಣದ ಕಾನೂನು ಸಂಘರ್ಷಕ್ಕೆ ಒಳಪಟ್ಟ ಬಾಲಕನ ವಾಸದ ಮನೆಯಲ್ಲಿಟ್ಟಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ **380** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

ಸದರಿ ಮೇಲ್ಕಂಡ ಆರೋಪಗಳನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿದ್ದರಿಂದ**,** ಅವುಗಳು ಈ ನ್ಯಾಯಾಲಯದಿಂದ ವಿಚಾರಣೆಯಾಗತಕ್ಕದೆಂದು ಆದೇಶಿಸಲಾಗಿದೆ**.**

ಪ್ರಃ 1. ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದ್ದೀರಾ**?** ಅವುಗಳು ನಿಮಗೆ ಅರ್ಥವಾಯಿತೇ**?**

1 ನೇ ಆರೋಪಿಯ ಉತ್ತರಃ

ಪ್ರಃ 2. ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ**?**

1 ನೇ ಆರೋಪಿಯ ಉತ್ತರಃ

**(**ಆರೋಪಿಗೆ ದಿನಾಂಕ 24.07.2024 ರಂದು ದೋಷಾರೋಪಣೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು**.** ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ**)**

**Sd/-**

ಮೂಡಿಗೆರೆ<br>
ದಿನಾಂಕಃ 24.07.2024

**C/c** ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು<br>
ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ.